ಪೂರ್ಣಗೊಳಿಸಿ, ಇದನ್ನು ಚಾಲನೆಗೊಳಿಸಲಾಗುವುದು.

ಘಟಕ-4:- ಈ ಘಟಕದ ಯಂತ್ರದ ಒಳ ಭಾಗಕ್ಕೆ ಬಹಳ ಹಾನಿಯಾಗಿದೆ. ರಿಪೇರಿ ಕೆಲಸ ಪ್ರಗತಿಯಲ್ಲಿದ್ದು, ಆದಷ್ಟು ಶೀಘ್ರವಾಗಿ ಇದನ್ನು ಚಾಲನೆಗೊಳಿಸಲಾಗುವುದು.

ಅಲ್ಲದೇ ಈ ವಿದ್ಯುತ್ ಉತ್ಪಾದನಾ ಕೇಂದ್ರವು ಬಹಳ ಹಳೆಯದಾಗಿದ್ದು, ಇದರಲ್ಲಿರುವ ಯಂತ್ರಗಳು ಸುಮಾರು 60 ವರ್ಷಕ್ಕೂ ಮೇಲ್ಪಟ್ಟು ಹಳೆಯದಾಗಿದೆ. ಒಟ್ಟು ಸ್ಥಾಪಿತ ಸಾಮರ್ಥ್ಯ 42 ಮೆಗಾವ್ಯಾಟ್ ಆಗಿದ್ದರೂ ಸಹ, ಈಗಿನ ಇದರ ಉತ್ಪಾದನಾ ಸಾಮರ್ಥ್ಯವು 16 ರಿಂದ 18 ಮೆಗಾವ್ಯಾಟ್ ಆಗಿದೆ. ಇದರಲ್ಲಿರುವ ಎಲ್ಲಾ ನಿಯಂತ್ರಕಗಳು ಹಾಗೂ ಸಾಧನ ಸಲಕರಣೆಗಳು ಬಹಳ ಪುರಾತನ ಕಾಲದ ತಾಂತ್ರಿಕತೆಯನ್ನು ಹೊಂದಿರುತ್ತವೆ. ಇವುಗಳ ದುರಸ್ತಿಗೆ ಬಿಡಿಭಾಗಗಳು ಸಿಗುವುದು ಕಷ್ಟಕರವಾಗಿದೆ. ಇದಕ್ಕಾಗಿ ಈಗಿರುವ ಹಳೆಯ ಮಾದರಿಯ ಎಲ್ಲಾ ಹತ್ತು ಘಟಕಗಳ ಸಾಧನ ಸಲಕರಣೆಗಳನ್ನು ಹೊಸದಾಗಿ ಬದಲಾಯಿಸಲು 57.63 ಕೋಟಿ ರೂ.ಗಳಿಗೆ ಯೋಜನಾವರದಿಯನ್ನು ತಯಾರಿಸಿ, ಪವರ್ ಫೈನಾನ್ಸ್ ಕಾರ್ಪೊರೇಷನ್ ಮುಖಾಂತರ ಸಾಲ ಸೌಲಭ್ಯಗಳನ್ನು ಪಡೆದು, ಇವುಗಳ ಜೀರ್ಣೋದ್ಧಾರ ಹಾಗೂ ನವೀಕರಣ ಕಾರ್ಯವನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. ಈ ಯೋಜನಾ ವರದಿಗೆ ಈ ವರ್ಷಾಂತ್ಯಕ್ಕೆ ಅನುಮೋದನೆ ದೊರಕುವ ನಿರೀಕ್ಷೆಯಿರುತ್ತದೆ. ಮಂಜೂರಾತಿಯಾದ ನಂತರದ ಎರಡೂವರೆ ವರ್ಷಗಳ ಅವಧಿಯಲ್ಲಿ ಈ ಕಾರ್ಯವನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಮೈಸೂರು ವಿಮಾನ ನಿಲ್ದಾಣವನ್ನು ಅಭಿವೃದ್ಧಿಗೊಳಿಸುವುದು.

3016:(4036)

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ): ಮಾನ್ಯ ಭಾರಿ ಮತ್ತು ಮಧ್ಯಮಕೈಗಾರಿಕೆ ಹಾಗೂ ಮೂಲಸೌಲಭ್ಯ, ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಮೈಸೂರು ನಗರದ ವಿಮಾನ ನಿಲ್ದಾಣವನ್ನು (ಮಂಡಕಳ್ಳಿ ಬಳ) ಅಭಿವೃದ್ಧಿ ಪಡಿಸಲು ಬೇಕಾಗುವ ಜಮೀನಿನ ವಿಸ್ತೀರ್ಣ ಎಷ್ಟು?

2) ಈ ಜಮೀನನ್ನು ಭೂ ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಸರ್ಕಾರ ಈಗಾಗಲೇ

ತೆಗೆದುಕೊಂಡಿರುವ ಕ್ರಮಗಳೇನು?

3) ಈ ಭೂಸ್ವಾಧೀನ ಪ್ರಕ್ರಿಯೆ ಎಷ್ಟು? ಕಾಲಾವಕಾಶ ತೆಗೆದುಕೊಳ್ಳಲಾಗುವುದು?

ಶ್ರೀ ಹೆಚ್.ಶಿವಪ್ಪ (ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು):

1) ಸರ್ಕಾರದ ಉನ್ನತ ಮಟ್ಟದ ಸಭೆಯಲ್ಲಿ ನಡೆಸಿದ ಚರ್ಚೆಯು ಮೈಸೂರಿನ ಈಗಿರುವ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೆ ಏರಿಸಲು ಜಮೀನನ್ನು ಗುರುತಿಸಲು ನಡೆದ ಪ್ರಸ್ತಾವನೆಯಂತೆ ಮೈಸೂರು ತಾಲ್ಲೂಕು, ಮರಸಿ, ಮಂಡಕಳ್ಳಿ ಮತ್ತು ಮಾದರಗಳ್ಳಿ ಗ್ರಾಮಗಳಲ್ಲಿ 217-10 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಸಮೀಕ್ಷೆ ನಡೆಸಲಾಗುತ್ತಿದೆ.

2) ಮೆ: ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾ ಇವರಿಂದ ಈಗ ಭೂ ಸಮಿಕ್ಷೆ ಮಾಡಿದ ಜಮೀನುಗಳನ್ನು ಭೂಸ್ವಾಧೀನಪಡಿಸಲು ಅನುಕೂಲವಾದ ವರದಿಯನ್ನು ನಿರೀಕ್ಷಿಸಲಾಗಿದೆ. ಸದರಿಯವರಿಂದ ಪ್ರಸ್ತಾವನೆ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

3) ಭೂಸ್ವಾಧೀನ ಕಾಯ್ದೆಯಂತೆ ಕಾಲಾವಕಾಶ ತೆಗೆದುಕೊಳ್ಳಲಾಗುವುದು.

ಲಾಲ್‌ಬಾಗ್ ಸಿದ್ದಾಪುರದಲ್ಲಿ ನೈರ್ಮಲ್ಯೀಕರಣ

3018:(4076)

ಶ್ರೀ ಎಸ್.ಸುರೇಶ್ ಕುಮಾರ್ (ರಾಜಾಜಿನಗರ): ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲಾಲ್ ಭಾಗ್ ಸಿದ್ದಾಪುರದ ವಸತಿ ಗೃಹದ ಸುತ್ತಲೂ ಇರುವ ಕಸದ ತೊಟ್ಟಿಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸದರಿ ವಿಭಾಗದಲ್ಲಿ ನಾಯಿ ಕಾಟ ತಪ್ಪಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಇ) ಹಸುಗಳನ್ನು ಬೀದಿ ಬದಿಯ ಲೈಟ್ ಕಂಬಗಳಿಗೆ, ಬೋರ್‌ವೆಲ್‌ಗಳಿಗೆ ಕಟ್ಟಿ ಹಾಕಿ ನೈರ್ಮಲ್ಯ ಹಾಳು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?